# ಹೊಸ ವರ್ಷಕ್ಕೆ ಹೊಸ ಹಾಡು



ರ್‍ಯಾಪ್ ಹಾಡುಗಳ ಮೂಲಕ ಸಾಕಷ್ಟು ಜನಪ್ರಿಯತೆ ಗಳಿಸಿರುವ ಚಂದನ್ ಶೆಟ್ಟಿ ಟೀವಿ ರಿಯಾಲಿಟಿ ಶೋ ಒಂದರ ಜಡ್ಜ್ ಕುರ್ಚಿಯಲ್ಲಿಯೂ ಕೂತಿದ್ದಾರೆ. ಚಂದನ್ ರೂಪಿಸಿದ 'ಮೂರೇ ಮೂರು ಪೆಗ್ಗಿಗೆ...' ಹಾಡು ಪಡ್ಡೆಗಳ ಮೊಬೈಲ್ ಅಷ್ಟೇ ಅಲ್ಲ, ನಾಲಿಗೆಯಲ್ಲಿಯೂ ಈಗಲೂ ಸದ್ದುಮಾಡುತ್ತಿರುತ್ತದೆ. ಚಂದನ್ ಅವರು ರೂಪಿಸಿದ ಹಾಡೊಂದು ಸಮುದಾಯವೊಂದರ ಸಂಸ್ಕೃತಿಯನ್ನು ಅಣಕಿಸುವಂತಿದೆ ಎಂಬ ವಿವಾದವೂ ಸಾಕಷ್ಟು ದೂಳೆಬ್ಬಿಸಿ ಕೊನೆಗೆ ಚಂದನ್ ಕ್ಷಮೆಯನ್ನೂ ಕೇಳಿದ್ದರು.

ಚಂದನ್ ಈಗ ಹೊಸ ವರ್ಷಕ್ಕಾಗಿ ಹೊಸ ಹಾಡಿನೊಂದಿಗೆ ಕನ್ನಡಿಗರ ಎದುರಿಗೆ ಬರಲು ಸಜ್ಜಾಗಿದ್ದಾರೆ. ಈ ಸಲ ಅವರಿಗೆ ಸಾಥ್ ನೀಡುತ್ತಿರುವವರು ಅವಳ ಬಾಳಸಂಗಾತಿಯೂ ಆಗಿರುವ ನಿವೇದಿತಾ ಗೌಡ. ಧರ್ಮ ಮತ್ತು ನಿಶ್ವಿಕಾ ನಾಯ್ಡು ಕೂಡ ಹಾಡಿನಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಕೊರೊನಾ ಕಾರಣದಿಂದ ಹೊಸ ವರ್ಷಾಚರಣೆಗೆ ಬ್ರೇಕ್ ಹಾಕುವ ಮಾತು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆಯ ಖುಷಿಯನ್ನು ಮನೆಯಲ್ಲಿಯೇ ಪಡೆದುಕೊಳ್ಳುವಂತೆ ಮಾಡಲು ಚಂದನ್ ಈ ಹಾಡನ್ನು ಬಿಡುಗಡೆ ಮಾಡುತ್ತಿದ್ದಾರಂತೆ. ಡಿ. 26ರಂದು ಈ ಹಾಡು ಬಿಡುಗಡೆಯಾಗಲಿದೆ.

ಹಾಡಿನ ಸಾಹಿತ್ಯವನ್ನು ಚಂದನ್ ಅವರೇ ಬರೆದಿದ್ದಾರೆ. ಶ್ರೀಶ ಕುದುವಳ್ಳಿ ಛಾಯಾಗ್ರಹಣ, ಮೋಹನ್ ಅವರ ನೃತ್ಯ ನಿರ್ದೇಶನ ಈ ಹಾಡಿಗೆ ಇದೆ. ■

# ಅಂತೂ ಬರ್ತಿದೆ ರೈ ಸಿನಿಮಾ!

ಮುತ್ತಪ್ಪ ರೈ ಬದುಕನ್ನು ಆಧರಿಸಿದ ಸಿನಿಮಾ ಕುರಿತು ಹಲವು ವರ್ಷಗಳಿಂದ ಸುದ್ದಿ ಏಳುತ್ತ ಅಡಗುತ್ತಲೇ ಇದೆ. ಸ್ವತಃ ಮುತ್ತಪ್ಪ ರೈಗೇ ತನ್ನ ಬದುಕನ್ನು ಆಧರಿಸಿದ ಸಿನಿಮಾ ಮಾಡುವ ಉಮೇದು ಇತ್ತು. ಹಲವು ನಿರ್ದೇಶಕರ ಬಳಿ ಚರ್ಚಿಸಿಯೂ ಇದ್ದರು. 2016ರಲ್ಲೊಮ್ಮೆ ರೈ ಬದುಕನ್ನು ಆಧರಿಸಿ ಸಿನಿಮಾವನ್ನು ರಾಮ್ ಗೋಪಾಲ್ ವರ್ಮ ನಿರ್ದೇಶಿಸಲಿದ್ದಾರೆ, ಅದರಲ್ಲಿ ವಿವೇಕ್ ಒಬೆರಾಯ್ ಮುತ್ತಪ್ಪ ರೈ ಪಾತ್ರವನ್ನು ನಿರ್ವಹಿಸಲಿದ್ದಾರೆ ಎಂಬ ನ್ಯೂಸ್ ಹೊರಬಿದ್ದಿತ್ತು. ಆದರೆ ಆ ಸಿನಿಮಾ ಶುರುವಾಗಲೇ ಇಲ್ಲ.



ರವಿ ಶ್ರೀವತ್ಸ

ಈಗ ರೈ ತೀರಿಕೊಂಡ ನಂತರ ಕನ್ನಡದ ನಿರ್ದೇಶಕ ರವಿ ಶ್ರೀವತ್ಸ ಅವರ ಬದುಕನ್ನ ಆಧರಿಸಿದ ಸಿನಿಮಾ ಮಾಡಲು ಮುಂದಾಗಿದ್ದಾರೆ. ಹೇಳಿ ಕೇಳಿ ರೌಡಿಸಂ ಸಿನಿಮಾ ಮಾಡುವುದರಲ್ಲಿ ರವಿ ಶ್ರೀವತ್ಸವ ಅವರದ್ದು ಎತ್ತಿದ ಕೈ. ಅದರಲ್ಲಿಯೂ 'ಟೈಗರ್ ಗಲ್ಲಿ' ಸಿನಿಮಾ ಸೋಲಿನ ಉರಿ ಮತ್ತು ಮೀ ಟೂ ವಿವಾದದಲ್ಲಿ ಆರೋಪಿತರಾದ ಉರಿಯಲ್ಲಿರುವ ಅವರೀಗ ಹಿಟ್ ಸಿನಿಮಾ ಕೊಡುವ ಉಮೇದಿನಲ್ಲಿದ್ದಾರೆ.

ದೀಕ್ಷಿತ್ ಎಂಬ ಹೊಸ ಹುಡುಗ ಈ ಚಿತ್ರದಲ್ಲಿ ರೈ ಪಾತ್ರವನ್ನು ನಿರ್ವಹಿಸಲಿದ್ದಾರಂತೆ. ರೈ ಅವರ ಭೂಗತಲೋಕದ ಕೃತ್ಯಗಳಿಂದ ಹಿಡಿದು ಇತ್ತಿಚೆಗಿನ ಸಮಾಜಸೇವಕ ಮುಖದವರೆಗೆ ಎಲ್ಲವನ್ನೂ ರೋಚಕ ಕಥನವಾಗಿ ತೋರಿಸಲು ಅವರು ಸಜ್ಜಾಗಿದ್ದಾರೆ. ಕೇರಳದ ಹುಡುಗಿ ಸೌಮ್ಯಾ ಮೆನನ್ ಈ ಚಿತ್ರದ ನಾಯಕಿ. ■



ಸೌಮ್ಯಾ ಮೆನನ್